



ಸೂರ್ಯಾಸ್ತದ ಸಮಯದಲ್ಲಿ, ಹಕ್ಕಿಗಳ ಚಿಲಿಪಿಲಿ, ಅದರ ಸೊಬಗನ್ನು ನೋಡಿಯೇ ಆನಂದಿಸಬೇಕು. ಅವುಗಳ ಸೊಬಗನ್ನು ನೋಡಿ ಮಕ್ಕಳ ಮನಸ್ಸು ಮುದಗೊಂಡಿದ್ದವು. ಕ್ಯಾಮೆರಾಗೂ ಕ್ಷಣ ಪುರುಸೊತ್ತು ಇಲ್ಲದ ಕೆಲಸ. ಒಂಟಿ ಕೊಂಬೆಯ ಮೇಲೆ ಹಕ್ಕಿಗಳ ವಿಚಿತ್ರ ಭಂಗಿಗಳನ್ನು ನೋಡುತ್ತಿದ್ದರೆ, ಕಣ್ಣು ರೆಪ್ಪೆಯನ್ನು ಆಡಿಸುವುದಕ್ಕೂ ಮನಸ್ಸು ಬರುವುದಿಲ್ಲ. ಬಹುಶಃ ಇಲ್ಲಿನ ಪ್ರಾಕೃತಿಕ ಆಹಾರ ಚಕ್ರಕ್ಕೆ ಇವುಗಳು ಈ ಪ್ರದೇಶವನ್ನು ನೆಚ್ಚಿಕೊಂಡಿರಬೇಕು.

ಆದರೆ ಕೆರೆಯನ್ನು ಇಷ್ಟೆಲ್ಲ ಜತನದಿಂದ ಅಭಿವೃದ್ಧಿ ಪಡಿಸಿದ್ದರೂ, ಊರಿನ ಕೊಳಚೆ ನೀರು ಈ ಕೆರೆಗೆ ಬರುವುದನ್ನು ತಡೆಗಟ್ಟುವುದಕ್ಕೆ ಏಕೆ ಸಾಧ್ಯವಾಗಿಲ್ಲ ಎನ್ನುವುದು ಮನಸ್ಸನ್ನು ಕಾಡುತ್ತದೆ. ಕೊಳಚೆ ನೀರು ಬೇರೆಡೆ ಹರಿಸಲು ಸ್ಥಳೀಯ ಆಡಳಿತ ದಾರಿಯನ್ನು ಹುಡುಕಿಕೊಳ್ಳಬೇಕಿದೆ.

ಕೆರೆಯ ಸುತ್ತ ಅರಣ್ಯ ಪ್ರದೇಶಕ್ಕೆ ಸೌರ ವಿದ್ಯುತ್ ದೀಪದ ವ್ಯವಸ್ಥೆಯಿದೆ. ಆದರೆ ಇಲ್ಲಿ ಯಾವುದೇ ರಕ್ಷಣಾ ಸಿಬ್ಬಂದಿ ಇಲ್ಲ.

ಈ ಕೆರೆಯ ಭವ್ಯ ಇತಿಹಾಸವೇ ಇದೆ. 1828ರಲ್ಲಿ ಅಂದಿನ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಇದರ ಅಭಿವೃದ್ಧಿಗೆ ಕಾರಣರಾದರು. ಅವರ ಕುಟುಂಬದ ಲಿಂಗರಾಜಮ್ಮಣ್ಣಿಯವರ ಹೆಸರನ್ನೇ ಕೆರೆಗೆ ಇಡಲಾಗಿದೆ. ಆ ಕಾಲದಲ್ಲಿ 200 ಎಕರೆ ಕೃಷಿ ಭೂಮಿಗೆ ನೀರಾವರಿ ಕಲ್ಪಿಸುವ ಉದ್ದೇಶದಿಂದ ಈ ಕೆರೆಯನ್ನು ನಿರ್ಮಿಸಲಾಗಿದೆ. ಮೈಸೂರಿನ ಹಸಿರು ಪರಿಸರಕ್ಕೆ ಈ ಕೆರೆಯ ಕೊಡುಗೆ ಅಮೂಲ್ಯವಾದದ್ದು.



